# ಕನ್ನಡ ಅಂಕಿಗಳನ್ನೇ ಬಳಸಿ

## ೦ ೧ ೨ ೩ ೪ ೫ ೬ ೭ ೮ ೯

ಕನ್ನಡ ಅಂಕಿಗಳು ಕನ್ನಡ ಬರವಣಿಗೆಯ ಅವಿಭಾಜ್ಯ ಅಂಗ. ಕನ್ನಡ ಅಕ್ಷರಗಳ ಕೆಳ ಭಾಗವಾದ ಒತ್ತಕ್ಷರಗಳನ್ನು ಇವು ಹೋಲುತ್ತವೆ. ದಕ್ಷಿಣ ಭಾರತದಲ್ಲಿ ಕನ್ನಡ ಮಾತ್ರ ತನ್ನ ಅಂಕಿಗಳನ್ನು ಉಳಿಸಿಕೊಂಡಿರುವುದು ಕನ್ನಡಿಗರ ಹೆಮ್ಮೆ. ಉತ್ತರ ಕರ್ನಾಟಕದಲ್ಲಿ ಕನ್ನಡ ಅಂಕಿಗಳ ಬಳಕೆ ವ್ಯಾಪಕವಾಗಿದೆ. ದಕ್ಷಿಣ ಕರ್ನಾಟಕದಲ್ಲಿ ಕನ್ನಡ ಅಂಕಿಗಳ ಸ್ಥಾನವನ್ನು ಇಂಗ್ಲಿಷ್ ಅಂಕಿಗಳು ಆಕ್ರಮಿಸಿವೆ. ಇದು ನಮ್ಮ ಭಾಷಿಕ ಸಂಸ್ಕೃತಿಗೆ ಅಪಾಯಕಾರಿ. ರಾಜಧಾನಿ ಬೆಂಗಳೂರಿನಲ್ಲಿ ಇದು ಹೆಚ್ಚಾಗಿದೆ. ಕನ್ನಡ ಬೆರಳಚ್ಚು ಯಂತ್ರದಲ್ಲಿ ಇಂಗ್ಲಿಷ್ ಅಂಕಿಗಳೇ ಇದ್ದುದು ಹಾಗೂ ಇಂಗ್ಲಿಷ್ ಪತ್ರಿಕೆಗಳ ಸಹ ಪ್ರಕಟಣೆಗಳಾದ ಕನ್ನಡದ ದೊಡ್ಡ ಪತ್ರಿಕೆಗಳು ತಾವು ಮೊದಲಿನಿಂದಲೂ ಬಳಸುತ್ತಿದ್ದ ಕನ್ನಡ ಅಂಕಿಗಳನ್ನು ಬಿಟ್ಟು ಇಂಗ್ಲಿಷ್ ಅಂಕಿಗಳಿಗೆ ಶರಣಾದುದು ಇದಕ್ಕೆ ಕಾರಣ.

ಕನ್ನಡ ಅಂಕಿಗಳ ಪ್ರಸಾರದಲ್ಲಿ ಸಮೂಹ ಮಾಧ್ಯಮಗಳ ಪಾತ್ರ ಹಿರಿದಾದುದು. ಜರ್ಮನ್ ಪಾದ್ರಿಗಳು ನಡೆಸುತ್ತಿದ್ದ ಕನ್ನಡದ ಮೊದಲ ಪತ್ರಿಕೆ *ಮಂಗಳೂರ ಸಮಾಚಾರ*ದಲ್ಲಿ ಕನ್ನಡ ಅಂಕಿಗಳನ್ನೇ ಬಳಸಲಾಗಿದೆ. ಇಂದು ಕರಾವಳಿಯ ಕನ್ನಡ ಪತ್ರಿಕೆಗಳು ಕನ್ನಡ ಅಂಕಿಗಳನ್ನು ಬಳಸಲು ಇನ್ನೂ ಮುಂದಾಗಿಲ್ಲ. ರಾಜ್ಯದ ಬಹುತೇಕ ಜಿಲ್ಲಾಮಟ್ಟದ ಪತ್ರಿಕೆಗಳು ಕನ್ನಡ ಅಂಕಿಗಳನ್ನೇ ಬಳಸುತ್ತಿರುವುದು ಅಭಿಮಾನದ ಸಂಗತಿ. ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದು ಪ್ರಸಿದ್ಧವಾದ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಪತ್ರಿಕೆಗಳು ಕನ್ನಡ ಅಂಕಿಗಳನ್ನೇ ಬಳಸುತ್ತಿವೆ. ಮೈಸೂರು, (ಚಾಮರಾಜನಗರ), ಮಂಡ್ಯ, ಕೊಡಗು ಜಿಲ್ಲೆಗಳ *ಆಂದೋಲನ* ಪತ್ರಿಕೆಯ ಆವೃತ್ತಿಗಳು ಕನ್ನಡ ಅಂಕಿಗಳನ್ನೇ ಬಳಸುತ್ತಿವೆ. *ಆಂದೋಲನ* ಪತ್ರಿಕೆಯು ತಮ್ಮ ಜಿಲ್ಲೆಯಲ್ಲಿ ಸಂಪೂರ್ಣವಾಗಿ ಕನ್ನಡ ಅಂಕಿಗಳನ್ನೇ ಬಳಸಿದ ಮೊದಲ ಪತ್ರಿಕೆ ಎಂದು ಕೊಡವರ ಅಭಿಮಾನಕ್ಕೆ ಪಾತ್ರವಾಗಿದೆ.

ಈಚಿನ ದಿನಗಳಲ್ಲಿ ರಾಜ್ಯಾದ್ಯಂತ ಕನ್ನಡದ ದೊಡ್ಡ ಪತ್ರಿಕೆಗಳು ತಮ್ಮ ನಡುವಿನ ಮಾರಾಟದ ಸ್ಪರ್ಧೆಯಲ್ಲಿ ತಮ್ಮ ಪತ್ರಿಕೆಗಳ ಬೆಲೆ ಇಳಿಸಿಕೊಳ್ಳುವ ವಿಷಯದಲ್ಲಿ ಏಕಾಭಿಪ್ರಾಯವನ್ನು ಪ್ರದರ್ಶಿಸಿದವು. ಅದೇ ರೀತಿ ಎಲ್ಲ ಕನ್ನಡ ಪತ್ರಿಕೆಗಳು ಕನ್ನಡ ಅಂಕಿಗಳನ್ನು ಬಳಸುವ ಮೂಲಕ ಕನ್ನಡ ಪತ್ರಿಕೋದ್ಯಮದ ಸಾಂಸ್ಕೃತಿಕ ಅರಿವಿನ ಬೆಲೆಯನ್ನು ಹೆಚ್ಚಿಸುವ ಬಗ್ಗೆಯೂ ಏಕಾಭಿಪ್ರಾಯ ತಳೆಯಬೇಕು. ರಾಜ್ಯಮಟ್ಟದ ಶ್ರೀಮಂತ ಪತ್ರಿಕೆಗಳು ರಾಜಧಾನಿಯಲ್ಲಿ ಸಿದ್ಧಪಡಿಸಿದ ತಮ್ಮ ಪತ್ರಿಕೆಗಳನ್ನು ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ಮುದ್ರಿಸುವ ಮೂಲಕ ಜಿಲ್ಲಾ ಮಟ್ಟದ ಬಡ ಪತ್ರಿಕೆಗಳ ಜೊತೆ ಸ್ಪರ್ಧಿಸುತ್ತಿವೆ. ಈ ಸ್ಪರ್ಧೆಯಿಂದ ಕನ್ನಡ ಅಂಕಿಗಳ ಜೊತೆಗೆ ಆರೋಗ್ಯಕರವೂ ಜೀವಂತವೂ ಆದ ಪ್ರಾದೇಶಿಕ ಭಾಷೆಯ ಸೊಗಡನ್ನು ಉಳಿಸಿ, ಬೆಳಸುತ್ತಿರುವ ಜಿಲ್ಲಾಮಟ್ಟದ ಹಲವು ಪತ್ರಿಕೆಗಳು ಪ್ರಕಟಣೆಯನ್ನು ನಿಲ್ಲಿಸುವ ಹಂತವನ್ನು ತಲುಪಿರುವುದು ವಿಷಾದದ ಸಂಗತಿ. ಈ ದೊಡ್ಡ ಪತ್ರಿಕೆಗಳು ರಾಜಧಾನಿಯ ಕನ್ನಡತನದ ರಕ್ತಹೀನವಾದ ಕನ್ನಡ ಭಾಷಾ ರೂಪಗಳನ್ನು ರಾಜ್ಯಾದ್ಯಂತ ಹರಡುತ್ತಿರುವುದು ಆತಂಕದ ವಿಷಯವಾಗಿದೆ.

ಕನ್ನಡ ಅಂತರಜಾಲ ತಾಣಗಳಲ್ಲಿ ಹಾಗೂ ಕನ್ನಡ ಪತ್ರಿಕೆಗಳ ಅಂತರಜಾಲ ಆವೃತ್ತಿಗಳಲ್ಲಿ ಕನ್ನಡ ಅಂಕಿಗಳಿವೆ. *ಕನ್ನಡ ಪ್ರಭ* ದಿನಪತ್ರಿಕೆಯ ಅಂತರಜಾಲ ಆವೃತ್ತಿಯಲ್ಲಿ ಕನ್ನಡ ಅಂಕಿಗಳನ್ನೇ ಬಳಸುತ್ತಿರುವುದು ಮೆಚ್ಚುವಂಥದು. ತಮ್ಮ ಅಂತರಜಾಲ ತಾಣಗಳಲ್ಲಿ ಕನ್ನಡ ಅಂಕಿಗಳನ್ನೇ ಬಳಸುತ್ತಿದ್ದ ಉದಯವಾಣಿ, ಪ್ರಜಾವಾಣಿ ಪತ್ರಿಕೆಗಳು ಸ್ವಂತ ಹೆಸರಿನ ಲಿಪಿ ತಂತ್ರಾಂಶಗಳನ್ನು ಬಳಸುವ ನೆಪದಲ್ಲಿ ಈಚೆಗೆ ಕನ್ನಡ ಅಂಕಿಗಳನ್ನು ಬಿಟ್ಟಿವೆ. ನವಕರ್ನಾಟಕ ಪ್ರಕಾಶನ ಸಂಸ್ಥೆಯ *ಹೊಸತು* (ಬೆಂಗಳೂರು) ಮಾಸಿಕ, *ಕರ್ಮವೀರ (ಬೆಂಗಳೂರು)*, *ಪ್ರಪಂಚ* (ಹುಬ್ಬಳಿ), ವಾರಪತ್ರಿಕೆಗಳು ಕನ್ನಡ ಅಂಕಿಗಳನ್ನೇ ಬಳಸುತ್ತಿವೆ. ಕನ್ನಡ ಜನತೆಗೆ ಕರ್ನಾಟಕ ಸರಕಾರ ಉಚಿತ ಕೊಡುಗೆಯಾಗಿ ನೀಡಿರುವ ಕನ್ನಡ ಅಂಕಿಗಳಿರುವ ಮಾನಕ ಕನ್ನಡ ಲಿಪಿ ತಂತ್ರಾಂಶ *ನುಡಿ*ಗೆ ಅನುಗುಣವಾದ ಕನ್ನಡ ಲಿಪಿ ತಂತ್ರಾಂಶಗಳನ್ನು ಎಲ್ಲ ಕನ್ನಡ ಪತ್ರಿಕೆಗಳು ಏಕರೂಪವಾಗಿ ಬಳಸಬೇಕು.

ದೃಶ್ಯ ಮಾಧ್ಯಮವಾದ ದೂರದರ್ಶನ ವಿವಿಧ ವಾಹಿನಿಗಳಲ್ಲಿ ಕನ್ನಡ ಅಂಕಿಗಳನ್ನು ಬಳಸಲಾಗುತ್ತಿದೆ. *ಚಂದನ* ವಾಹಿನಿಯ ವಾರ್ತೆಗಳು ಮತ್ತು ಕಾರ್ಯಕ್ರಮಗಳ ವಿವರಣೆಯ ಪಟ್ಟಿಯಲ್ಲಿ ಕನ್ನಡ ಅಂಕಿಗಳನ್ನು ಬಳಸುತ್ತಿರುವುದು ಸಂತೋಷದ ಸಂಗತಿ. ಎಲ್ಲ ವಾಹಿನಿಗಳೂ ಏಕರೂಪವಾಗಿ ಸಂಪೂರ್ಣವಾಗಿ ಕನ್ನಡ ಅಂಕಿಗಳನ್ನೇ ಬಳಸಬೇಕು.

ಅಂಕಿಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸುವ ಮತ್ತೊಂದು ಮಹತ್ವದ ಸ್ಥಳ ವಾಹನಗಳ ನೋಂದಣಿ ಫಲಕಗಳು. ರಾಜ್ಯ ಸರಕಾರದ ಎಲ್ಲ ವಾಹನಗಳು ಕಡ್ಡಾಯವಾಗಿ ಕನ್ನಡದಲ್ಲಿಯೂ ನೋಂದಣಿ ಫಲಕಗಳನ್ನು ಪ್ರದರ್ಶಿಸಬೇಕೆಂದು ಕರ್ನಾಟಕ ಸರಕಾರ ಆದೇಶ ನೀಡಿರುವುದು ಪ್ರಜಾಪ್ರಭುತ್ವದಲ್ಲಿ ಜನತೆಯ ಭಾಷೆಗೆ ಸಲ್ಲಲೇ ಬೇಕಾದ ಗೌರವವನ್ನು ಸಲ್ಲಿಸಿದ ಸ್ತುತ್ಯರ್ಹವಾದ ಕಾರ್ಯವಾಗಿದೆ (ಸುತ್ತೋಲೆ ಸಂಖ್ಯೆ: ಸಾ ಆ: ನೋಂದಣಿ-೨: ವೈವ : ೭೮:೨೦೦೦-೦೧ ದಿನಾಂಕ ೩೧-೮-೨೦೦೧). ಹಲವಾರು ಪ್ರಜ್ಞಾವಂತ ನಾಗರಿಕರು ತಮ್ಮ ವಾಹನಗಳ ಮೇಲೆ ಸ್ವಪ್ರೇರಣೆಯಿಂದ ಕನ್ನಡ ಅಂಕಿಗಳಲ್ಲಿ ನೋಂದಣಿ ಫಲಕಗಳನ್ನು ಪ್ರದರ್ಶಿಸಿರುವುದು ಅಭಿನಂದನಾರ್ಹ, ಅನುಕರಣೀಯ. ರಸ್ತೆಗಳಲ್ಲಿ ಸಂಚರಿಸುವ ವಾಹನಗಳು ಸರಕಾರಿ/ಖಾಸಗಿ ವಾಹನಗಳೆ ಎಂದೇನೂ ಸಾರ್ವಜನಿಕರು ಗಮನಿಸುವುದಿಲ್ಲ. ಆದ್ದರಿಂದ ರಾಜ್ಯದಲ್ಲಿ ನೋಂದಣಿಯಾಗುವ ಎಲ್ಲ ಖಾಸಗೀ ವಾಹನಗಳೂ ರಾಜ್ಯದ ಜನತೆಯ ಭಾಷೆಯ ಅಕ್ಷರ ಮತ್ತು ಅಂಕಿಗಳಲ್ಲಿಯೂ ನೋಂದಣಿ ಫಲಕಗಳನ್ನು ಕಡ್ಡಾಯವಾಗಿ ಪ್ರದರ್ಶಿಸಲು ಸರಕಾರ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು.

ಕರ್ನಾಟಕ ಸಾರಿಗೆ ಸಂಸ್ಥೆಯ ವಾಹನಗಳ ಮೇಲೆ ಕನ್ನಡ ಅಕ್ಷರ ಮತ್ತು ಅಂಕಿಗಳಲ್ಲಿಯೂ ನೋಂದಣಿ ಫಲಕಗಳಿರುವುದನ್ನು ನೆರೆಯ ತಮಿಳುನಾಡು, ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶಗಳು ಸಕ್ರಿಯವಾಗಿ ಅನುಮೋದಿಸಿವೆ. ಆ ರಾಜ್ಯಗಳ ಸರಕಾರಿ ವಾಹನಗಳ ಮೇಲೆ ತಮ್ಮ ರಾಜ್ಯ ಭಾಷೆಗಳ ಅಕ್ಷರ ಮತ್ತು ಅಂಕಿಗಳಲ್ಲಿ ನೋಂದಣಿ ಫಲಕಗಳನ್ನು ಅವು ಪ್ರದರ್ಶಿಸಿವೆ. ತೆಲುಗು ಭಾಷೆಯಲ್ಲಿ ತೆಲುಗು ಅಂಕಿಗಳ ಬಳಕೆ ತಪ್ಪಿದ್ದರೂ ಈಗ ನೋಂದಣೀ ಫಲಕಗಳಲ್ಲಿ ತೆಲುಗು ಅಂಕಿಗಳು ಮತ್ತೆ ಕಾನಿಸಿಕೊಂಡಿರುವುದು ಮೆಚ್ಚುವಂಥದಾಗಿದೆ. ತಮಿಳು ಭಾಷೆ ತನ್ನ ಅಂಕಿಗಳನ್ನು ಬಳಸುತ್ತಿಲ್ಲವಾದರೂ ರಾಜ್ಯ ಭಾಷೆಯಲ್ಲಿ ನೋಂದಣಿ ಫಲಕವನ್ನು ಪ್ರರ್ಶಿಸಬೇಕೆಂಬ ತಾತ್ವಿಕ ನಿಲುವಿಗೆ ಬದ್ಧವಾಗಿ ತಮಿಳು ಅಕ್ಷರಗಳಲ್ಲಿ ನೋಂದಣಿ ಫಲಕಗಳನ್ನು ಪ್ರದರ್ಶಿಸಿದೆ. ರಾಜ್ಯಕ್ಕೆ ಬರುವ ಈ ರಾಜ್ಯಗಳ ಬಸ್ಸುಗಳ ಮೇಲಿನ ಆಯಾ ರಾಜ್ಯ ಭಾಷೆಗಳ ಅಕ್ಷ ಮತ್ತು ಅಂಕಿಗಳಲ್ಲಿ ನೋಂದಣಿ ಫಲಕಗಳಿರುವುದನ್ನು ಗಮನಿಸಬಹುದು. ಆದರೆ ಕರ್ನಾಟಕದ ಕೆಲವು ಜಿಲ್ಲೆಗಳ ಸಾರಿಗೆ ವಿಭಾಗಗಳಲ್ಲಿ ಕನ್ನಡ ಅಂಕಿಗಳು ಬಳಕೆಯಾಗುತ್ತಿಲ್ಲ. ಅವರೆಲ್ಲರೂ ಕೂಡಲೆ ಕನ್ನಡ ಅಂಕಿ ಮತ್ತು ಅಕ್ಷರಗಳ ನೋಂದಣಿ ಫಲಕಗಳನ್ನು ಪ್ರದರ್ಶಿಸಬೇಕು.

ಅಂತಾರಾಷ್ಟ್ರಿಯ ನಗರ ಮುಂಬಯಿನ ಮಹಾನಗರ ಸಾರಿಗೆಯ ಬಸ್ಸುಗಳ ಚೀಟಿಗಳು ಮರಾಠಿ ಭಾಷೆಯಲ್ಲಿವೆ. ಅದೇ ರೀತಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳ ಚೀಟಿಗಳು ಕನ್ನಡ ಅಂಕಿಗಳಲ್ಲೇ ಇರಬೇಕು.

ನಾಡಿನ ಪ್ರತಿಷ್ಠಿತ ಹಿಂದೂಸ್ತಾನ್ ಯಂತ್ರೋಪಕರಣಗಳ ಸಂಸ್ಥೆಯು ಕನ್ನಡ ಅಂಕಿಗಳಿರುವ ಪುರುಷರ *ಚಂದನ, ಲಲಿತ* ಹಾಗೂ ಸ್ತ್ರೀಯರ *ಶ್ರೇಯಸ್* ಕೈಗಡಿಯಾರಗಳನ್ನು ತಯಾರಿಸಿದೆ. ಬೆಂಗಳೂರಿನ ಸೌರ ಸಂಸ್ಥೆ ಸ್ತ್ರೀ ಪುರುಷರಿಬ್ಬರ ಕೈಗಡಿಯಾರಗಳನ್ನೂ, ಟೆಂಪಸ್ ಸಂಸ್ಥೆ ಕನ್ನಡ ಗೋಡೆ ಗಡಿಯಾರಗಳನ್ನೂ ತಯಾರಿಸುತ್ತಿವೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯ, ಮೈಸೂರಿನ *ಆಂದೋಲನ,* ಬೆಂಗಳೂರಿನ *ಮಲ್ಲಿಗೆ ಸಾಹಿತ್ಯ ದರ್ಶಿನಿ,* ಬೆಳಗಾವಿಯ *ವಿಜ್ಞಾನ ವಸ್ತುಭಂಡಾರ* ಕನ್ನಡ ಅಂಕಿಗಳ ದಿನಸೂಚಿಗಳನ್ನು ಪ್ರಕಟಿಸಿರುವುದು ಸಂತೋಷದ ಸಂಗತಿ. ಎಲ್ಲ ದಿನಸೂಚಿಗಳೂ ಕನ್ನಡ ಅಂಕಿಗಳನ್ನೇ ಬಳಸಬೇಕು.

ಅಂಕಿಗಳು ಬಳಕೆಯಾಗುವ ಮಹತ್ವದ ಮತ್ತೊಂದು ಕ್ಷೇತ್ರ ಶಿಕ್ಷಣ. ಮಹಾರಾಷ್ಟ್ರದ ಕನ್ನಡ ಮಾಧ್ಯಮ ತರಗತಿಗಳಲ್ಲಿ ಗಣಿತವನ್ನು ಕನ್ನಡ ಅಂಕಿಗಳಲ್ಲಿಯೇ ಬೋಧಿಸುತ್ತಿರುವುದು ಗಮನಾರ್ಹ. ಕರ್ನಾಟಕದಲ್ಲಿ ಗಣಿತವನ್ನು ಕನ್ನಡ ಅಂಕಿಗಳಲ್ಲಿಯೇ ಬೋಧಿಸಲು ಸರಕಾರ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಸರಕಾರದ ಶಾಲೆಗಳಲ್ಲಿ ಮಾಹಿತಿ ತಂತ್ರಜ್ಞಾನವನ್ನು ಬೋಧಿಸುವ *ಮಾಹಿತಿ ಸಿಂಧು* ಯೋಜನೆ ಆರಂಭವಾಗಿರುವುದು ಸ್ವಾಗತಾರ್ಹ ಸಂಗತಿ. ಆದರೆ ಅಲ್ಲಿ ಸರಕಾರದ ಮಾನಕ ಕನ್ನಡ ಲಿಪಿ ತಂತ್ರಾಂಶ ನುಡಿಯನ್ನು ಬಳಸುವುದನ್ನು ಕಡ್ಡಾಯವಾಗಿ ಕಲಿಸುವ ವ್ಯವಸ್ಥೆಯಾಗಬೇಕು.

ಕನ್ನಡ ಬಳಕೆಯ ಪ್ರಮುಖ ಸಾಧನವಾದ ಗಣಕಗಳಲ್ಲಿ ಬಳಸುವ ಕನ್ನಡ ತಂತ್ರಾಂಶಗಳ ಶಿಷ್ಟತೆಯನ್ನು ಕರ್ನಾಟಕ ಸರಕಾರ ನಿರ್ಧರಿಸಿದೆ. ಅದರಲ್ಲಿ ಕನ್ನಡ ಅಂಕಿಗಳಿವೆ. ಎಲ್ಲ ತಂತ್ರಾಂಶ ತಯಾರಕರೂ ಈ ಶಿಷ್ಟತೆಗೆ ಅನುಗುಣವಾಗಿ ತಮ್ಮ ಕನ್ನಡ ಲಿಪಿ ತಂತ್ರಾಂಶಗಳಲ್ಲಿ ಕನ್ನಡ ಅಂಕಿಗಳನ್ನೇ ಕೊಡುತ್ತಿರುವುದು ಸಂತೋಷದ ಸಂಗತಿ. ಪ್ರಸಿದ್ಧ ಶ್ರೀಲಿಪಿ ಲಿಪಿ ತಂತ್ರಾಂಶ ತಯಾರಿಕೆಯ ಸಂಸ್ಥೆಯಾದ ಮಾಡ್ಯುಲಾರ್–ಇನ್ಫೊಟೆಕ್ *ಲೈನೆಕ್ಸ್ ಕಾರ್ಯವ್ಯವಸ್ಥೆಯಲ್ಲಿ* ಕನ್ನಡ ಸೇರಿದಂತೆ ಭಾರತೀಯ ಭಾಷೆಗಳ ಲಿಪಿ ತಂತ್ರಾಂಶವನ್ನು ಸಿದ್ಧಪಡಿಸಿದೆ. ಇದರಲ್ಲಿ ಬಂಗಾಳಿಯಲ್ಲಿ ಮಾತ್ರ ಬಂಗಾಳಿ ಅಂಕಿಗಳಿವೆ. ಕನ್ನಡ ಸೇರಿದಂತೆ ಉಳಿದ ಭಾಷೆಗಳ ಅಂಕಿಗಳನ್ನೇ ಕೊಟ್ಟಿಲ್ಲದಿರುವುದು ಗಂಭೀರವಾಗಿ ಪರಿಗಣಿಸಬೇಕಾದ ಸಂಗತಿಯಾಗಿದೆ. ಕನ್ನಡ ಅಂಕಿಗಳಿಲ್ಲದ ಕನ್ನಡ ಲಿಪಿ ಮಾಲೆ ಅಪೂರ್ಣ. ಶ್ರೀಲಿಪಿಯ ಲೈನೆಕ್ಸ್ ಲಿಪಿ ತಂತ್ರಾಂಶದಲ್ಲಿ ಕನ್ನಡ ಅಂಕಿಗಳನ್ನು ಕೂಡಲೆ ಅಳವಡಿಸಬೇಕು.

ಕನ್ನಡ ಅಂಕಿಗಳ ಬಳಕೆ ಒಂಬತ್ತು ಅಂಕಿಗಳ ಬಳಕೆ ಮಾತ್ರವಲ್ಲ, ಕನ್ನಡದ ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿಕೊಳ್ಳುವ ಪ್ರಯತ್ನದ ಬಹು ಮುಖ್ಯವಾದ ಭಾಗ. ಆದ್ದರಿಂದ ಕನ್ನಡಿಗರು ತಮ್ಮ ಎಲ್ಲ ವ್ಯವಹಾರಗಳು, ಮನೆಯ ಸಂಖ್ಯೆ, ವಾಹನ ನೋಂದಣಿ ಸಂಖ್ಯೆ, ಆಹ್ವಾನ ಪತ್ರಿಕೆ, ಜಾಹೀರಾತು, ಕನ್ನಡ ಸಮ್ಮೇಳನಗಳು, ಮೊದಲಾದ ಎಲ್ಲ ಕಡೆಗಳಲ್ಲಿ ಕನ್ನಡ ಅಂಕಿಗಳನ್ನೇ ಬಳಸಬೇಕು. ಕನ್ನಡ ಅಂಕಿಗಳನ್ನು ಬಳಸುವ ಪತ್ರಿಕೆಗಳು, ದಿನಸೂಚಿಗಳು, ಗಡಿಯಾರಗಳು ಮೊದಲಾದ ವಸ್ತುಗಳನ್ನು ಕೊಂಡು ಕನ್ನಡ ಅಂಕಿಗಳ ಬಳಕೆಯನ್ನು ಪ್ರೋತ್ಸಾಹಿಸಿ ಕನ್ನಡ ಸಂಸ್ಕೃತಿ ಪ್ರಸಾರದಲ್ಲಿ ಅರ್ಥಪೂರ್ಣವಾಗಿ ಭಾಗವಹಿಸಬೇಕು.

*ಭಾಷೆಯಲ್ಲಿ ಮಾತು ತಾಯಿ, ಅರ್ಥ ತಂದೆ ; ಬರವಣಿಗೆಯಲ್ಲಿ ಅಕ್ಷರ ತಾಯಿ, ಅಂಕಿ ತಂದೆ*
*ನಮ್ಮ ತಾಯಿಯ ಜೊತೆ ನಮ್ಮ ತಂದೆಯನ್ನೇ ಗೌರವಿಸೋಣ!*

ಪ್ರೀತಿಯಿಂದ

**ಡಾ ಪಂಡಿತಾರಾಧ್ಯ**

ಕನ್ನಡ ಅಧ್ಯಾಪಕ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ ಮೈಸೂರು ೫೭೦ ೦೦೬

*ದೂರವಾಣಿ ೦೮೨೧ ೨೫೨೩೪೪೩೨* ವಿ ಅಂಚೆ pandita@vsnl.com

ರಾಷ್ಟ್ರೀಯ ಶಕೆ ೧೯೨೫ ಹೇಮಂತ ಮಾರ್ಗಶಿರ ೨೭ ● ದಶಮಿ ಹಸ್ತಾ ಗುರುವಾರ ೧೮ ಡಿಸೆಂಬರ್ ೨೦೦೩
ಮೂಡಬಿದಿರೆಯಲ್ಲಿ ನಡೆದ ೭೧ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿತರಿಸಿದೆ.